Electricity (Supply to Nidagal Hobl).

Q.—555. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) when deposit was made by the raiyats of Nidagal Hobli, Pavagada Taluk, for the supply of electric power to wells for growing more foodgrains ;

(*b*) whether any amount is provided so far in the budgets for the purpose and if not whether provision would be made in the current year's Budget ?

A.—Dr. R. NAGAN GOWDA (Minister for Agriculture). —

(*a*) During October 1953.

(*b*) There is no specific provision in the budget for 1954-55.

The work can only be taken up after the frequency conversion in the area is completed.

ಶ್ರೀ ಸಿ. ಟಿ. ಹನುಮಂತಯ್ಯ.—ಪಾವುಗಡ ತಾಲ್ಲೂಕು ನಿಡಗಲ್ ಹೋಬಳಿಯ ರೈತರು ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಎಷ್ಟು ವರ್ಷದಿಂದ ಕೇಳುತ್ತಿದ್ದಾರೆ.

Dr. R. NAGAN GOWDA.—I don't have the exact date here ; perhaps since October 1953.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ಎಷ್ಟು ಜನ ಡಿಪಾಸಿಟ್ ಕೊಟ್ಟಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಬೆಳ್ಳಿಬೆಟ್ಟ ಗ್ರಾಮದವರು 10 ಜನ, ಶೈಲಾಪುರದವರು ಆರು ಜನ ಅರ್ಜಿದಾರರು ಡಿಪಾಜಿಟ್ ಕೊಟ್ಟಿದ್ದಾರೆ.

ಶ್ರೀ ಸಿ. ಟಿ. ಹನುಮಂತಯ್ಯ.—ಅಲ್ಲಿ 50 ಸೈಕಲ್ ಕರೆಂಟ್ ಇಲ್ಲದೆ, 25 ಸೈಕಲ್ ಕರೆಂಟ್ ಏರ್ಪಾಡಿರುವುದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರದವರು ಹೇಳಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ಈಗ frequency conversion ಕೆಲಸವನ್ನು ಆಗಲೇ ಕೈಕೊಂಡಿದ್ದೇವೆ. Frequency conversion ಇನ್ನೂ ಆಗದಿರುವುದರಿಂದ ವಿದ್ಯುಚ್ಛಕ್ತಿಯನ್ನು ನಿರಬರಾಯಿ ಮಾಡಲು ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಎಷ್ಟು ರೂಪಾಯಿಗಳಿಗೆ ಎಸ್ಟಿಮೇಟಾಗಿದೆ ?

ಡಾ॥ ಆರ್. ನಾಗನಗೌಡ.—60 irrigation ಪಂಪುಗಳಿಗೆ, 85 ಹಾರ್ಸ್ ಪವರ್‌ಗೆ 65,283 ರೂಪಾಯಿಗಳೆಂದು ಎಸ್ಟಿಮೇಟಾಗಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈ ಸಾರಿ ಇದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿ ಕೆಲಸವನ್ನು ತೆಗೆದುಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—Frequency conversion ಕೆಲಸವನ್ನು ತೀವ್ರವಾಗಿ ಮಾಡುತ್ತಿದ್ದೇವೆ. ಅದರ ಜೊತೆಗೆ ಇದನ್ನೂ ತೆಗೆದುಕೊಳ್ಳುತ್ತೇವೆ.

Water Supply Scheme for Urban and Rural Areas.

Q.—68. Sri G. NARAYANA GOWDA (Mulbagal-Srinivasapur).—

Will the Government be pleased to state : —

whether the Central Government has asked them to submit a scheme regarding drinking water supply to the urban and rural parts in the State ?

A.—Sri T. CHANNIAH (Minister for Public Health and Local Self-Government).—Yes.

ಶ್ರೀ ಜಿ. ನಾರಾಯಣಗೌಡ.—ಈ ಸ್ಕೀಮನ್ನು ತಯಾರು ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಅದರ ವಿವರಗಳನ್ನು ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಟಿ. ಚನ್ನಯ್ಯ.—ಈಗ ಕೊಡುವುದಕ್ಕೆ ಸಾಧ್ಯವಿಲ್ಲ. ನಾನಾ ಡಿಸ್ಟ್ರಿಕ್ಟ್‌ಗಳಿಂದ ಜಿಲ್ಲಾವಾರಾಗಿ proposalsನ್ನು call for ಮಾಡಿದ್ದೇವೆ. ಇನ್ನೂ ಎಲ್ಲಾ ಡಿಸ್ಟ್ರಿಕ್ಟ್‌ಗಳಿಂದ proposals ಬಂದಿಲ್ಲ. ಮೂರು ಡಿಸ್ಟ್ರಿಕ್ಟ್‌ಗಳಿಂದ ಮಾತ್ರ ಬಂದಿವೆ.

ಶ್ರೀ ಜಿ. ನಾರಾಯಣಗೌಡ.—ಎಷ್ಟು ರೂಪಾಯಿಗಳಿಗೆ ಅಂದಾಜು ಮಾಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ನೂಮಾರು 100 ಲಕ್ಷ ರೂಪಾಯಿಗಳಿಗೆ.

ಶ್ರೀ ಜಿ. ನಾರಾಯಣಗೌಡ.—ಇದರಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ನೀರು ಒದಗಿಸುವುದಕ್ಕೆ ಎಷ್ಟು ಅಂದಾಜು ಮಾಡಿದ್ದೀರಿ.

ಶ್ರೀ ಟಿ. ಚನ್ನಯ್ಯ.—ನೂಮಾರು 20 ಲಕ್ಷ.

ಶ್ರೀ ಜಿ. ನಾರಾಯಣಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದ ಅನೇಕ ಗ್ರಾಮಗಳಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಕೆಲವು ಗ್ರಾಮಗಳಿಗೆ ಇಲ್ಲ ಎಂಬುದು ಗೊತ್ತಿದೆ.

ಶ್ರೀ ಜಿ. ನಾರಾಯಣಗೌಡ.—20 ಲಕ್ಷ ರೂಪಾಯಿಗಳ ಅಂದಾಜು ಮಾಡಿರುವುದು ಬಹಳ ಕಡಮೆಯೆಂದು ತಿಳಿಯಬಹುದಲ್ಲವೇ ?

ಶ್ರೀ ಟಿ. ಚನ್ನಯ್ಯ.—20 ಲಕ್ಷ ರೂಪಾಯಿಗಳು ಮೊದಲನೆ ಮತ್ತು ಎರಡನೆಯ ವರ್ಷಕ್ಕೆ ಮಾತ್ರ. ಮುಂದೆ ಅದೇ ರೀತಿಯಾಗಿ progressive ಆಗಿ ತೆಗೆದುಕೊಂಡು ಮಾಡುತ್ತೇವೆ.

Sri A. BHEEMAPPA NAIK.—What is the condition on which the Central Government pays its grant ? Have the Local Government to pay anything or who would foot the bill completely ?

Sri T. CHANNIAH.—The Government of Mysore and the concerned local bodies would contribute towards the construction of the wells. This would be supplemented by local effort wherever possible.

Sri A. BHEEMAPPA NAIK.—In what proportion, Sir ?

Sri T. CHANNIAH.—Half of the estimate by the Government of India, and the remaining half will be borne by the Government of Mysore, Local Bodies and local people.

ಶ್ರೀ ಎಂ. ಪಳನಿಯಪ್ಪನ್.—ಬೆಂಗಳೂರು ಕಾರ್ಪೊರೇಷನ್ನಿನ ವಾಟರ್ ಸಪ್ಲೈ ಸ್ಕೀಮ್ ಕೂಡ ಇದರಲ್ಲಿ ಸೇರಿದೆಯೆ ?

ಶ್ರೀ ಟಿ. ಚನ್ನಯ್ಯ.—ಸೇರಿದೆ.

Sri M. PALANIYAPPAN.—May I know the amount recommended for this Scheme, Sir.

ಶ್ರೀ ಟಿ. ಚನ್ನಯ್ಯ.—ಇನ್ನೂ allocation ಮಾಡಿಲ್ಲ. ಸುಮಾರು 8—10 ಲಕ್ಷ ರೂಪಾಯಿ ಗಳನ್ನು ಕೊಡಬಹುದೆಂದು ಆಲೋಚನೆ ಮಾಡಲಾಗಿದೆ.

ಶ್ರೀ ಎಂ. ಪಳನಿಯಪ್ಪನ್.—8—10 ಲಕ್ಷ ರೂಪಾಯಿಗಳು ಬೆಂಗಳೂರು ಕಾರ್ಪೊರೇಷನ್ ಪ್ರದೇಶದ ಒಂದು ಭಾಗಕ್ಕೆ ಕೂಡ ಸಾಕಾಗುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಒಟ್ಟು ಸ್ಕೀಮಿನ ಅಂದಾಜು 79 ಲಕ್ಷ 12 ಸಾವಿರ ರೂಪಾಯಿಗಳು. ಆದರೆ, ಇದರಲ್ಲಿ ಇಂಡಿಯಾ ಸರ್ಕಾರದವರ ಸಾಲ, ಗ್ರಾಂಟು ಎಲ್ಲಾ ಸೇರುತ್ತದೆ. ನದಕ್ಕೆ ಕೊಟ್ಟಿರತಕ್ಕ 75 ಲಕ್ಷ ರೂಪಾಯಿಗಳಲ್ಲಿ 10—15 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ.

Sri M. PALANIYAPPAN.—In view of the fact that the City is growing and as we are now handicapped much for water supply, will the Government just see that they give priority to the Bangalore area in implementing the scheme ?

Sri T. CHANNIAH.—This is now under the consideration of Government.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಸಂಸ್ಥಾನದಲ್ಲಿ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲವೆಂಬ ಲೆಕ್ಕವನ್ನೇನಾದರೂ ಇಟ್ಟಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಒಟ್ಟು ಲೆಕ್ಕ ಇಟ್ಟಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿ ಗೌಡ.—ಗ್ರಾಮಾಂತರ ಪ್ರದೇಶಗಳಿಗೆ ನೀರನ್ನೊದಗಿಸಬೇಕೆಂದು ಒಂದು ಯೋಜನೆ ಇರುವಾಗ, ಇಷ್ಟು ಗ್ರಾಮಕ್ಕೆ ಬಾವಿಗಳಿಲ್ಲ, ಇಷ್ಟು ಗ್ರಾಮಗಳಿಗೆ ದುಡ್ಡು ಕೊಡಬೇಕು ಎಂದು ಹೇಳಿ ಒಂದು ಸ್ಕೀಮನ್ನು ಕೇಂದ್ರ ಸರ್ಕಾರದವರಿಗೇ ಕಳುಹಿಸಿ ಕೊಡುವುದು ಸೂಕ್ತವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅದನ್ನು consider ಮಾಡುತ್ತೇವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಗ್ರಾಮಾಂತರ ಪ್ರದೇಶಗಳಿಗೆ ಇಷ್ಟು ವರ್ಷಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಎಲ್ಲಾ ಗ್ರಾಮಗಳಿಗೂ ಸಂಪೂರ್ಣವಾಗಿ ಒದಗಿಸಬೇಕೆಂಬ ಒಂದು ಯೋಜನೆಯಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಷ್ಟೇ ವರ್ಷಗಳಲ್ಲಿ ಪೂರೈಸಬೇಕೆಂದು ಖಚಿತವಾಗಿ ಇಲ್ಲ; ಪ್ರತಿವರ್ಷವೂ ನೀರಿನ ಬಾವಿಗಳನ್ನು ತೆಗೆಯಿಸಬೇಕೆಂದಿದೆ.

ಶ್ರೀ ಎಸ್. ಆಂಜನೇಯರೆಡ್ಡಿ.—ಚಿಂತಾಮಣಿ ಪೌರಸಭೆಯೂ ಈ ಯೋಜನೆಯಲ್ಲಿ ಸೇರಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಸ್. ಆಂಜನೇಯರೆಡ್ಡಿ.—Rural water supply ವಿಚಾರವಲ್ಲಿ progressನ್ನು ಕಂಡುಹಿಡಿಯುವುದಕ್ಕೆ ಒಂದು ಕಮಿಟಿಯನ್ನು ಮಾಡಿರಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಆಂಜನೇಯರೆಡ್ಡಿ.—ಅದನ್ನು review ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಟಿ. ಚನ್ನಯ್ಯ.—ಪ್ರತಿ ತಿಂಗಳೂ ಕೆಲಸ ನಡೆಯುತ್ತಿದೆ. ಯಾವ ರೀತಿ ಕೆಲಸ ನಡೆದಿದೆಯೆಂದು ಇಲಾಖೆಯವರು review ಮಾಡುತ್ತಾರೆ.

S. No. 109 in Gundugal (sites for Harijans).

Q.— 561. Sri C. T. HANUMANTHAIYA-(Pavagada Scheduled Castes).—Will the Government be pleased to state :—

when petitions were received praying for the grant of land in Survey No. 109 for the construction of houses to 15 Harijan families of Gundugal, Kodigenahalli Hobli of Madhugiri Taluk ?

A.—Sri T. CHANNIAH (Minister for Public Health and Local Self-Government).—

In March 1950.

ಶ್ರೀ ಸಿ. ಟಿ. ಹನುಮಂತಯ್ಯ.—ಗುಂಡುಗಾಲು ಹಳ್ಳಿಯ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಬೇಕೆಂದು ನಾಲ್ಕು ವರ್ಷಗಳಿಂದ ಕೇಳುತ್ತಿದ್ದರೂ, ಇನ್ನೂ ಅವರಿಗೆ ಜಮೀನು ಕೊಡಲು ಕಾರ್ಯಕ್ರಮ ಕೈಕೊಳ್ಳದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈ ವಿಷಯದಲ್ಲಿ ಈಗಾಗಲೇ ರಿಕಾರ್ಡ್ ನಡೆದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಹಾಗಾದರೆ ಇನ್ನೂ ಏಕೆ ಕೊಟ್ಟಿಲ್ಲ ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ಪಾನಮಾಡತಕ್ಕ ಹರಿಜನರು ಆ ಜಮೀನಿನ ಕೆಲವು plotಗಳನ್ನ ಅವರೇ ಕೊಂಡುಕೊಂಡಿದ್ದಾರೆ. ಅದಕ್ಕಾಗಿ ಅಲ್ಲರತಕ್ಕ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರು ಈಗ ಅಲ್ಲರತಕ್ಕ ಜಮೀನನ್ನು ಅಕ್ವೈರ್ ಮಾಡಬೇಕಾಗಿಲ್ಲವೆಂದು ಹೇಳಿದ್ದಾರೆ.